# ನೇಸರು

ತಿಂಗಳೋಲೆ

ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol. VIII No. 7 ಜುಲೈ 1990




THE MAHAMASTAKABHISEKA AT SRAVANABELAGOLA

**The Mysore Association, Bombay**

393, Bhau Daji Road, Matunga, Bombay - 400 019. Tel: 4374647/4379574 Grams: "KARUNADU"

# DYNASTIES OF KARNATAKA WHICH RULED OUTSIDE KARNATAKA

When we look back in to the history, we find that there have been many dynasties which, while having their origin in Karnataka, had extented their empire far and wide and ruled over many parts which were outside the Present Karnataka State. These have resulted in sizeable contribution by the Rulers and the elite to the cultural ecnomic and aesthetic or spiritual progress of the people in these regions. Patronage to art and learning and tolerance of various religions have created a climate where progress was possible. These regions got a good economic order under these rulers. Monumental works in the field of economics, Science, Astronomy, architecture & Sculpture were produced during this period. The rulers not only patronised learning and art but some of them were highly learned and have authored many great works.




Perhaps Kadamba's were the earliest (4th century) Dynasty to cross Krishna river and extend their empire beyond. This dynasty hailed from Banavasi in Uttra Kannada. By the middle of 6th century AD, their empire had extended up to river Narmada. A branch of the Banavasi Kadambas ruled over Goa for a long period as fendatories of the Karnataka rulers.

In the early 7th century, Chalukya's who had their capital at Badami extended their empire. It extended upto river Mahi in Gujarat and elephanta islands and Revathi Islands near Ratnagiri. Revathi Island was an important Naval base at that time.

Vishnuvardhana, who was ruling the western region of Chalukya empire was sent to vengi in the Eastern region as a viceroy in early 7th Century. In due course of time, he became independent and started the Eastern Chalukyas Dynasty. This Dynasty ruled for the next 5 centuries the regions in east which to-day come under the state of Andhra Pradesh. Stable rule of 500 yeas in this region by the Chalukya's has led to economic, cultural and literary growth in the region.

Chalukyas of Vengi continued to rule for 200 more years but two dynasties emerged. Chalukya-cholas and chalukyas of Vemulavada After this, further breaking up of this dynasty took place like chalukya's of Pithapuram, Yelamanchili, srikurman, Niravadyapura etc. How ever in pockets chalukyas were able to sustain the rule till early 16th century.

A branch of Chalukya's also ruled the Southern Gujarat with Navasari as the Capital. Sendrakas, feudatories of Chalukya's who ruled from Navasari are believed to have defeated Arabs.

Manyakheta, which is known today as Mulkhed in Gulbarga district was the place of origin of Rashtrakutas. This dynasty extended its empire from Kaveri in south to South Gujarat, Malwa and Lattalur ( Latur of modern Maharastra). Rashtrakuta ruler Vallabha Raja is compared by the Arabic historian who visited India at that time to the Soverign of China, the Caliph

of Bhagdad and the Emperor of Constantinople. In the mid 8th century, Krishna I of Chalukya's dynasty extended the empire to include regions like, Surat, Broach and Kaira. Some years later Kutch also came under their rule. However Rashtrakuta rule did not last long as some years later, Taila a feudatory of Chalukyas overthrew the Rashtrakuta king and founded the Kalyani Chalukyan dynasty. Mularaja who ruled in Gujarat had his kingdom extending upto Jodhpur in North and Sabaramathi river in South. His descendent Jayasimha assumed the title of Siddha Raja and added Binnamala ( in today Rajastan) to his empire. He was a great patrons of art & learning. He extended the famous Rudra Mahalaya at Sidhpur and added many sculptures to it. Many temple and irrigation projects were built in his time. It is believed that to build the famous 'Sahasralinga Tala' workers were brought in from Karnataka. He also built school for law and astrology. by the end of 13th century the chalukyan rule in Gujarat came to an end.

The empire of Kalyani chalukya's brokeup towards to end of 12 century into the sevunas (Yadavas) of Devagiri, the Kakatiya's of warangal and the Hoysalas of Dwarasamudra. Many scholars believe that Seveunas were Kannadigas hailing from the Dharwar-Bijapur region who ruled with Devagiri ( Present Daulatabad near Aurangabad) as their capital. Constant strife and wars between Sevunas, Kakatiyas and Hoysalas lead to attrition of their energies making them easy prey for the invading muslim rulers from North.

A branch of the Rashtrakuta dynasty was ruling in Orissa also in the 12th century. It is believed that this branch is from the Lattlur i.e. Present Latur, in other words the Rastrakutas from Manyakheta or Malkhed. Vikramaditya the 4th is believed to have extended his empire from Hassan in South, Konkan in west, Narmada in north and Andhra Pradesh in East. His troops which entered Orissa in one of their expeditions is believed to have founded this branch of the dynasty. It is believed that one of the group that accompained Chalukyas in their expedition to Bengal, had stayed back to work in the army of Pala kings which later founded the Sena dynasty of Bengal. However this dynasty did not last long. Vijaya Sena of Sena Dynasty invaded and won Mithila, East Bengal and Kamarupa. Nyayadeva another ruler of Senas is believed to have conquered Nepal.

Thus we see that Karnataka has left an indelible impression on the life of people covering large parts of this country. The intermingling of the tradition and culture of Karnataka with those of the other parts have led to the emergence of harmonious blend of both which have survived over the Centuries.

**- M. A. N. Prasad.**

FOR ALL YOUR DOMESTIC AND INTERNATIONAL TRAVEL ARRANGMENTS CONTACT

**AUGUST TRAVEL SERVICE**

Agents For
इंडियन एयरलाइन्स
Indian Airlines
वायुदूत
Vayudoot

**REGD. OFFICE :**
3/15 ASHIANA SECTOR 17
VASHI - NEW BOMBAY
0215/682558-591

**ALSO AT:**
GRAMS : AUGTRASERV
2/16 KABBAUR HOUSE
SION (E) BOMBAY 400 022.
4077750-2984/4093573

# ಕಾಲಗಣನೆ

- ಭಾರತಿ ಪ್ರಸಾದ್

ಮಾನವನು ಕಾಲದ ಗಣನೆಯನ್ನು ಎಂದಿನಿಂದ ತಿಳಿದನು ಎಂಬುದರ ಬಗ್ಗೆ ಖಚಿತವಾಗಿ ನಮಗೆ ಗೊತ್ತಿಲ್ಲದಿದ್ದರೂ, ಈ ಕಲೆಯು ಮಾನವನಿಗೆ ಸಹಸ್ರಾರು ವರ್ಷಗಳಿಂದ ತಿಳಿದಿದೆ. ಎಂಬುದಂತೂ ಎಲ್ಲರಿಗೂ ತಿಳಿದಿರುವ ವಿಷಯ. ದೇಶ ದೇಶಗಳಲ್ಲಿ ಅವರವರ ಪಂಚಾಂಗಗಳ (Calender) ಪ್ರಕಾರ ತಿಂಗಳುಗಳು ಮತ್ತು ವರ್ಷಗಳಲ್ಲಿ ವ್ಯತ್ಯಾಸಗಳು ಕಂಡು ಬಂದರೂ, ವಾರದಲ್ಲಿ ಏಳು ದಿನಗಳು ಎಂಬುದು ವಿಶ್ವಾದ್ಯಂತ ಬಳಕೆಯಲ್ಲಿರುವ ಕೆಲವು ಪಂಚಾಗಗಳ ಬಗ್ಗೆಯೂ ಮತ್ತು ಈ ಕಾಲಗಣನೆಗೆ ಭಾರತೀಯರ ಕೊಡುಗೆ ಬಗ್ಗೆಯೂ ಒಂದು ಪಕ್ಷಿ ನೋಟ.

ವಾರದ 7 ದಿನಗಳ ಎಣಿಕೆಯನ್ನೂ ಮತ್ತು ಅವುಗಳ ಹೆಸರುಗಳನ್ನು (ಭಾನು, ಸೋಮ, ಮಂಗಳ....ಇತ್ಯಾದಿ) ನೀಡಿದ್ದು ಭಾರತೀಯ ಶಾಸ್ತ್ರಜ್ಞರು. ಇಂದು ವಿಶ್ವಾದ್ಯಂತ ಇದೇ ಹೆಸರುಗಳನ್ನು ಉಪಯೋಗಿಸುತ್ತಿದ್ದಾರೆ. ಭಾರತೀಯ ಜೋತಿಷ್ಯ ಶಾಸ್ತ್ರದ ಪ್ರಕಾರ ಒಂದು ಸುರ್ಯೋದಯದಿಂದ ಮತ್ತೊಂದು ಸೂರ್ಯೋದಯಕ್ಕೆ ಇರುವ ಅವಧಿಯನ್ನು 'ಅಹೋರಾತ' ಎಂದು ಕರೆಯುತ್ತಾರೆ. ಒಂದು ಅಹೋರಾತ್ರವನ್ನು 12 ಲಗ್ನೆಗಳನ್ನಾಗಿ ವಿಭಜಿಸುತ್ತಾರೆ. ಒಂದು ಲಗ್ನದ ಅರ್ಧ ಅವಧಿಯನ್ನು 'ಹೋರಾ' ಎಂದು ಹೇಳುತ್ತಾರೆ. ಈ ರೀತಿ ಪ್ರತಿಯೊಂದು ದಿನದಲ್ಲೂ 24 ಹೋರಾಗಳುಂಟು. (ಇಂಗ್ಲಿಷಿನ hour ಮತ್ತು Latin ನ Hora ಈ ಭಾರತೀಯ ಪದದಿಂದ ಬಂದಿದೆ).

ಭಾರತೀಯ ಶಾಸ್ತ್ರದ ಪ್ರಕಾರ ಚೈತ್ರ ಶುದ್ಧ ಪ್ರತಿಪದೆಯಂದು ಎಲ್ಲಾ ಗ್ರಹಗಳೂ ಮೇಷ ರಾಶಿಯಲ್ಲಿ ಸೇರಿರುತ್ತವೆ. ಅಂದಿನ ಸುರ್ಯೋದಯದ ಸಮಯದಲ್ಲಿ ಆತನೇ ಸ್ವಾಮಿ. ನಂತರ ಇತರ ಹೋರಾಗಳಿಗೆ ಕ್ರಮವಾಗಿ ಇತರ ಗ್ರಹಗಳು ಸ್ವಾಮಿಗಳಾಗುತ್ತಾರೆ. 24 ಘಂಟೆಗಳ ನಂತರ ಮತ್ತೆ ಸೂರ್ಯೋದಯದ ಸಮಯದಲ್ಲಿ ಆ ಘಂಟೆಯ ಒಡೆತನ ಸಿಗುವದು ಚಂದ್ರನಿಗೆ. ಅದು ಚಂದ್ರನ ದಿನವಾದ್ದರಿಂದ ಅದನ್ನು ಸೋಮವಾರ ಎಂದು ಕರೆಯುತ್ತಾರೆ. ಇದೇ ರೀತಿ ಪುನಃ 24 ಘಂಟೆಗಳ ನಂತರ ಮಂಗಳ ಗ್ರಹಕ್ಕೆ ಸೂರ್ಯೋದಯ ಸಮಯದ ಅಧಿಪತ್ಯ ಸಿಗುವುದು. ಆದ್ದರಿಂದ ಅದು ಮಂಗಳವಾರ. ಇದೇರೀತಿ ಏಳು ದಿವಸಗಳಿಗೂ ಬೇರೆ ಬೇರೆ ಹೆಸರುಗಳಾದವು. ಇದು ಭಾರತದಿಂದ ಇತರ ದೇಶಗಳಿಗೆ ವ್ಯಾಪಿಸಿ Latin ಮತ್ತು Saxon ಭಾಷೆಗಳ ಮೂಲಕ English ಭಾಷೆಗೂ ಸೇರಿ, ಈ ಎಲ್ಲಾ ಭಾಷೆಗಳಲ್ಲಿಯೂ ವಾರಗಳಿಗೆ ಇದೇ ಹೆಸರುಗಳು ನಿಂತವು.

ವಿಶ್ವದ ಪಂಚಾಗಗಳಲ್ಲಿ ಅನೇಕ ವೈವಿಧ್ಯತೆಯನ್ನು ಕಾಣಬಹುದು. ವರ್ಷಗಳ ಗಣನೆಗೆ ಬೇರೆ ಬೇರೆ ಶಕಗಳನ್ನು ಉಪಯೋಗಿಸುವುದನ್ನು ನಾವು ಕಾಣುತ್ತೇವೆ.

ಶಕವರ್ಷವನ್ನು ಮೂಲವಾಗಿಟ್ಟುಕೊಂಡು ಪಂಚಾಗ, ಜನ್ಮಕುಂಡಲಿ ರಚನೆ ಇತ್ಯಾದಿ ಭಾರತದಲ್ಲಿ ಬಹಳ ಹಿಂದಿನಿಂದ ಬಂದ ಪದ್ಧತಿ ಪ್ರಾಚೀನ ಭಾರತದ ಖಗೋಳ ಶಾಸ್ತ್ರದ ಮೇಲೆ ರೂಪಿಸಲಾಗಿದ್ದ ಈ ಪದ್ಧತಿಯು 3ನೇ ಶತಮಾನದಲ್ಲಿ ಪಾಶ್ಚಾತ್ಯರ ಬಳಕೆಗೆ ಬಂದಿತೆಂದೂ ಬಳಿಕ ಆಧುನಿಕ ವೈಜ್ಞಾನಿಕ ತಳಹದಿಯ ಮೇಲೆ ಸ್ಥಿರ ಪಡಿಸಲಾಯಿತು ಎಂದು ಹೇಳುತ್ತಾರೆ.

ಭಾರತ ಸರಕಾರವು 1957 ರಲ್ಲಿ ಶಕವರ್ಷದ ಮೇಲೆ ಆಧಾರಿತ ಏಕರೂಪ ರಾಷ್ಟ್ರೀಯ ಪಂಚಾಂಗವನ್ನು ಜಾರಿಗೆ ತಂದಿತು.

ಗುಜರಾತ್, ಮತ್ತು ರಾಜಸ್ತಾನದಲ್ಲಿ ಕೆಲವಡೆ ಇನ್ನೂ ವಿಕ್ರಮ ಶಕೆ ಅಥವಾ ಸಮವತ್ ಶಕ ಬಳಕೆಯಲ್ಲಿರುವದು. ವಿಕ್ರಮಾದಿತ್ಯನು ತಾನು ಶಕ ರಾಜರನ್ನು ಗೆದ್ದ ವಿಜಯೋತ್ಸವವನ್ನು ಆಚರಿಸುವ ಸಲುವಾಗಿ ಈ ವಿಕ್ರಮ ಶಕೆ ಆರಂಭವಾಯಿತು ಎಂದು ನಂಬಲಾಗಿದೆ.

ಅಕ್ಬರನ ಕಾಲದಲ್ಲಿ ಬಂಗಾಳ ಕೆಲವು ಭಾಗದಲ್ಲಿ ಬೇಸಾಯ ಮತ್ತು ಜಮಾಬಂದಿಯನ್ನು ಮೂಲವಾಗಿಟ್ಟುಕೊಂಡು ಒಂದು ಶಕವನ್ನು ಪ್ರಾರಂಭಿಸಿದರು. ಇದಕ್ಕೆ 'ಫಸಲಿ ಶಕ' ಎನ್ನುತ್ತಾರೆ. ಮುಸಲ್ಮಾನರು 'ಹಿಜರಿಶಕ' ವನ್ನು ಆಚರಿಸುತ್ತಾರೆ. ಇದು ಮಹಮ್ಮದ ಪೈಂಗಬರ್ ಮಕ್ಕಾದಿಂದ ಮದಿನಾಗೆ (ಕ್ರಿ.ಶ. 622 ರಲ್ಲಿ) ಮಾಡಿದ ಪ್ರಯಾಣದೊಂದಿಗೆ ಆರಂಭವಾಯಿತೆಂದು ನಂಬಿಕೆ.

16ನೇ ಶತಮಾನದವರೆಗೂ, ಎಲ್ಲಾ ಕ್ರೈಸ್ತ ದೇಶಗಳಲ್ಲೂ JULIAN Calender ಜಾರಿಯಲ್ಲಿತ್ತು. ಇದರಲ್ಲಿ ಎಲ್ಲಾ ಶತಕದ ಕೊನೆಯ ವರ್ಷ ಅಧಿಕವರ್ಷ (Leap Year) ಆಗಿರುತ್ತಿತ್ತು. ಇದರಿಂದ ಎಣಿಕೆಗೆ ಅನೇಕ ತೊಂದರೆಗಳಾಗುತ್ತಿತ್ತು. 1582ರಲ್ಲಿ Pape Gregory ಅಕ್ಟೋಬರ 5ನ್ನು 15 ಎಂದು ಎಣಿಸಲು ಆದೇಶವಿತ್ತು. ಪ್ರತಿ ನಾಲ್ಕು ವರ್ಷಕ್ಕೊಮ್ಮ Leap Year ಎಂದು ಸಾರಿದನು. ಇದನ್ನು Gregorian Calender ಎಂದು ಕರೆಯುತ್ತಾರೆ. 1752 ರಿಂದ ಬ್ರಿಟೀಷರು ಈ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ಇದು ಬಹಳ ಭಾಗಗಳಲ್ಲಿ ಬಳಕೆಯಲ್ಲಿದೆ.

ಜ್ಯೂಯಿಷ ಕ್ಯಾಲೆಂಡರ ಕ್ರೈಸ್ತ ಜನನಕ್ಕೆ ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಜಾರಿಗೆ ಭಂದ ಪದ್ಧತಿ ಎಂದು ನಂಬಲಾಗಿದೆ. 354 ದಿನಗಳ ವರ್ಷವನ್ನು 29, ಅಥವಾ 30 ದಿನಗಳುಳ್ಳ ತಿಂಗಳುಗಳಾಗಿ ಈ ಪದ್ಧತಿಯಲ್ಲಿ ವಿಭಜಿಸಿದ್ದಾರೆ.

ಝುರೋಷ್ಟ್ರಿಯನ್ನರ ಪಂಚಾಂಗ ಮತ್ತೊಂದು ಬಹಳ ಪ್ರಾಚೀನ ಪದ್ಧತಿ. ಇದು ಭಾರತ ಮತ್ತು ಇರಾನ್‌ನಲ್ಲಿ ಕ್ರಿ.ಶ. 622 ರಲ್ಲಿ ಬಳಕೆಗೆ ಬಂದಿತೆಂದು ನಂಬಿಕೆ.


ಗೌತಮ ಬುದ್ಧನ ನಿಧನಾನಂತರ ಬೌದ್ಧ ಪಂಚಾಂಗ ಬಳಕೆಗೆ ಬಂದಿತು. ಇದರ ವರ್ಷವು ವೈಶಾಖ ಪೂರ್ಣಿಮೆಯಿಂದ ಆರಂಭವಾಗುತ್ತದೆ.

ಸೌರ ಹಾಗೂ ಚಂದ್ರಮಾನ ವರ್ಷಗಳ ಸಂಯೋಜಿತ ಪದ್ಧತಿ ನಮ್ಮ ದೇಶದಲ್ಲಿ ಬಳಕೆಯಲ್ಲಿದೆ. ಸೌರಮಾನ ಮಾಸದ ದಿನಗಳು ಸೂರ್ಯೋದಯದ ಎಣಿಕೆಯಿಂದ ಪ್ರಾರಂಭವಾದರೆ, ಚಂದ್ರಮಾನ ದಿನಗಳು ಚಂದ್ರನು ವೃದ್ಧಿ ಹೊಂದುವ ದಿನದಿಂದ ಪ್ರಾರಂಭವಾಗುತ್ತವೆ.

ಯುಗಾದಿಯಂದು ಪಂಚಾಂಗ ಪಠಣ ಹಿಂದುಗಳ ಧಾರ್ಮಿಕ ಪದ್ಧತಿಯಾಗಿ ಉಳಿದಿದೆ.

---

## CONGRATULATIONS !



ARUN S.P.

Arun S. P. has passed the Bombay Board H. S. C. Examination scoring the 5th Rank. A student of Vaze College of Mulund, Arun had also stood first in his school in Thane in S. S. C. A NTSE scholar, Arun has also passed the JEE and the Rourkee Entrance Examinations with high marks. Arun is the Son of Our Life Member Shri. M P. Sampathkumaran.

Nesru **WISHES ARUN** every success.

# ಆರೋಗ್ಯ

ಡಾ. ಹೇಮಾ ದಿವಾಕರ್, ಬೆಂಗಳೂರು

## ಕ್ಯಾನ್ಸರ್ ಮತ್ತು ಮಹಿಳೆ

ಮನುಷ್ಯನ ಆಯಸ್ಸು ಹೆಚ್ಚಾದಂತೆ ವಯಸ್ಸಾದ ನಂತರ ಕ್ಯಾನ್ಸರ್ ಅಂತಹ ಕಾಯಿಲೆಗಳು ಬುರುವ ಸಂಭವ ಜಾಸ್ತಿ. ನಾಲ್ಕರಲ್ಲಿ ಒಬ್ಬರಿಗೆ ಕ್ಯಾನ್ಸರ್ ಎಂಬ ಗುಂಪಿಗೆ ಸೇರಿದ ನಾನಾ ತರಹದ ಖಾಯಿಲೆಗಳು ಬರುತ್ತವೆ. ರೋಗಕ್ಕೊಳಗಾದ (ಸೆಲ್ಸ) ಜೀವಕಣಗಳು cells ಹಿಡಿತವಿಲ್ಲದೇ ಬೆಳೆದುಕೊಂಡು ತಡೆಹಿಡಿಯದಿದ್ದಲ್ಲಿ ಸಾವಿಗೆ ದಾರಿಯಾಗುತ್ತದೆ. ಆದ್ದರಿಂದ ಈ ರೋಗವು ಬೆಳೆದು ಹರಡುವುದಕ್ಕೆ ಮೊದಲೇ ಕಂಡು ಹಿಡಿದು ಔಷಧೋಪಚಾರ ನಡೆಸಿದಲ್ಲಿ ಗುಣಪಡಿಸಬಹುದು.

ಕ್ಯಾನ್ಸರ್ ಖಾಯಿಲೆಗೆ ಗಂಡಸರಿಗೂ ಅಥವಾ ಹೆಂಗಸರಿಗೂ ಬರಬಹುದು. ಗರ್ಭ ಚೀಲಕ್ಕೆ ಸಂಬಂಧಪಟ್ಟ ಕ್ಯಾನ್ಸರ್ ಹಾಗೂ ಕರುಳಿನ ಹಾಗೂ ಶ್ವಾಸಕೋಶದ cancer ಇವುಗಳ ಮಹಿಳೆಯರಿಗೆ ವಿಶೇಷ ಸಂಬಂಧ.

**ಕ್ಯಾನ್ಸರ್ ಎಂದರೇನು ?**

ಸಾಮಾನ್ಯವಾಗಿ ದೇಹದಲ್ಲಿರುವ cells (ಸೆಲ್ಸ) ಜೀವಕಣಗಳು ಹಳೆಯದಾದವುಗಳನ್ನು ತೆಗೆದು ಹಾಕಿ, ಹೊಸದಾದುವುಗಳನ್ನು ಬೆಳೆಸಿ, ದೇಹವು ಪುಷ್ಟಿಕರವಾಗಿರಲು ಸಹಕರಿಸುತ್ತವೆ. ಇದರಲ್ಲಿ ಯಾವುದೇ ಸೆಲ್ಸ ಹಿಡಿತವಿಲ್ಲದೇ ಬೆಳೆಯುತ್ತಾ ಹೋದಲ್ಲಿ ಕ್ಯಾನ್ಸರ್ ಗಡ್ಡೆ ಹುಟ್ಟುತ್ತದೆ. ಬಹಳ ಬೇಗ ಇದು ತನ್ನ ಜಾಗದಿಂದ ಮತ್ತಿತರ ಕಡೆಗಳಿಗೆ ರಕ್ತದ ಮೂಲಕವೋ ಅಥವಾ ದುಗ್ದರಸ (Lymphatics) ಮೂಲಕವೋ ಹರಡಿ ಮಿತಿ ಮೀರಿದ ಪ್ರಮಾಣ ಮಟ್ಟದಲ್ಲಿ ಸಾವಿಗೆ ಕಾರಣವಾಗುತ್ತದೆ.

**ಬ್ರೆಸ್ಟ (Breast) ಕ್ಯಾನ್ಸರ್ :** ಪ್ರತಿ ಹನ್ನೊಂದು ಮಹಿಳೆಯರಲ್ಲಿ ಒಬ್ಬರಿಗೆ ತಮ್ಮ ಜೀವನದಲ್ಲಿ ಸ್ತನಗಳ ಕ್ಯಾನ್ಸರು ಬರುವ ಸಂಭವವಿದೆ. ಇದರಿಂದ ಗಾಬರಿಯಾಗುವುದರಲ್ಲಿ ಅರ್ಥವಿಲ್ಲ ಸ್ತನಗಳಲ್ಲಿ ಗಡ್ಡೆ ಅಥವಾ ಗಂಟು ಬಂದಿದ್ದರೆ ಊತವಿದ್ದರೆ ನೋವಿದ್ದರೆ ತೊಟ್ಟಿನಿಂದ ದ್ರವ ಹೊರ ಬರುತ್ತಿದ್ದರೆ ಎಚ್ಚರಿಕೆ ವಹಿಸಿ ವೈದ್ಯರ ಸಲಹೆ ಕೇಳಬೇಕು. ಶೇಕಡಾ 80 ಗಡ್ಡೆಗಳು ಕ್ಯಾನ್ಸರ ಆಗಿರದೇ ಬೇರೆ ಪ್ರಮಾಣದ ಗಡ್ಡೆಗಳಾಗಿರುತ್ತವೆ. ಪ್ರತಿ ತಿಂಗಳೂ ಮಹಿಳೆಯು ಸ್ವತಃ ತನ್ನ ಮೊಲೆಗಳನ್ನು ಪರಿಶೀಲಿಸಿಕೊಂಡರೆ ಇಂತಹ ಯಾವುದೇ ಗಡ್ಡೆಗಳಿದ್ದಲ್ಲಿ ಇವು ದೊಡ್ಡದಾಗಿ ಬೆಳೆದು ಹಬ್ಬುವ ಮೊದಲೇ ಇದನ್ನು ತೆಗೆದು ಹಾಕಿ, ಗುಣಪಡಿಸಬಹುದು. ಎಕ್ಸರೇ ಹಾಗೂ mammography ಹಾಗೂ biopsy ಯಂತಹ ವಿಶೇಷ ಪರಿಶೀಲನೆಗಳು ಹಲವರಿಗೆ ಮಾಡಲೇಬೇಕಾಗುತ್ತದೆ. ಇವುಗಳನ್ನು ಅವಲಂಬಿಸಿ ಇದು ಕ್ಯಾನ್ಸರ್ ಗಡ್ಡೆ ಹೌದೋ ಅಲ್ಲವೋ ಎಂಬುದನ್ನು ಖಾತ್ರಿ ಪಡಿಸಿಕೊಂಡು ವೈದ್ಯರು ಮುಂದಿನ ಸಲಹೆ ಕೊಡುತ್ತಾರೆ.

**ಸರ್ವಿಕಲ್ ಕ್ಯಾನ್ಸರ್ :** ಗರ್ಭಕೋಶದ ಬಾಯಿಗೆ ಬರುವ ಕ್ಯಾನ್ಸರಗೆ ಸರ್ವಿಕಲ್ ಕ್ಯಾನ್ಸರ್ ಎಂದು ಹೆಸರು. colposcopy ಹಾಗೂ Pap smear ಎಂಬ ಸಾಧನೆಗಳಿಂದ ಇದನ್ನು ಅಲ್ಪಾವಸ್ಥೆಯಲ್ಲಿಯೇ ಕಂಡು ಹಿಡಿಯಬಹುದು. ಆಗಾಗ ಮುಟ್ಟಾಗುವಂತೆ ರಕ್ತಸ್ರಾವವಾಗುತ್ತಿದ್ದಲ್ಲಿ ನಿಮ್ಮ ವೈದ್ಯರ ಸಲಹೆ ಕೇಳಬೇಕು. ಈ ರೋಗಕ್ಕೆ ಮೂಲಕಾರಣ ಗೊತ್ತಿಲ್ಲದೇ ಇದ್ದರೂ ಬಹುಶಃ ಸಂಭೋಗ ಕ್ರಿಯೇ ಮಾಡಿದಾಗ ರಸಿಕೆ (Virus) ಯಿಂದ ಇದರ ಪ್ರಾರಂಭವಾಗುತ್ತಿರಬಹುದು.

ಇಪ್ಪತ್ತು ವಯಸ್ಸಿಗೆ ಮೇಲ್ಪಟ್ಟ ಯಾವುದೇ ಮಹಿಳೆಗೆ ಈ ರೋಗ ಬರಲು ಸಾಧ್ಯ.

**ಗರ್ಭಚೀಲದ ಕ್ಯಾನ್ಸರ್ :** ಸಾಮಾನ್ಯವಾಗಿ 50 ವಯಸ್ಸಿಗೆ ಮೇಲ್ಪಟ್ಟ ಮಹಿಳೆಯರಲ್ಲಿ ಮಕ್ಕಳಾಗದಿದ್ದವರಲ್ಲಿ ಮುಟ್ಟು ತಿಂಗಳಿಗೆ ಸರಿಯಾಗಿ ಆಗದಿದ್ದಲ್ಲಿ ಅತಿ ದಪ್ಪನಾಗಿದ್ದವರಲ್ಲಿ ಅಥವಾ ಜಾಸ್ತಿ ವಯಸ್ಸಿನ ನಂತರ ಮುಟ್ಟು ನಿಂತಿದ್ದರೆ ಈ ರೋಗ ಬರುವ ಸಂಭವ ಹೆಚ್ಚು. ಎಸ್ಟ್ರೋಜಿನ್ ಎಂಬ ಪದಾರ್ಥದಿಂದ ಕ್ಯಾನ್ಸರ್ ಹೆಚ್ಚಾಗಿಯೂ, Pragesterone ಎಂಬ ಪದಾರ್ಥದಿಂದ ಕ್ಯಾನ್ಸರ್ ಪ್ರಮಾಣ ಕಮ್ಮಿ ಯಾಗಿಯೂ ಬರುತ್ತದೆ. ಅಧಿಕವಾಗಿ ಅವೇಳೆಯಲ್ಲಿ ರಕ್ತಸ್ರಾವವಾದರೆ Endometrial biopsy ಹಾಗೂ ಡಿ ಎಂಡ್ ಸಿ ಮಾಡಿ ಈ ರೋಗದ ಇರುವಿಕೆಯನ್ನು ಖಚಿತ ಪಡಿಸಬಹುದು.

**ಅಂಡಾಶಂದ Ovary ಕ್ಯಾನ್ಸರ್ :** ಈ ರೋಗಕ್ಕೆ ಮೂಲ ಕಾರಣ ಗೊತ್ತಿಲ್ಲದೇ ಇದ್ದರೂ 70 ವಯಸ್ಸಿಗೆ ಮೀರಿದ ಬಂಜೆಯರಲ್ಲಿ ಕ್ಯಾನ್ಸರ್ ಬರುವ ಸಂಭವ ಹೆಚ್ಚು. ರೋಗದ ಚಿನ್ಹೆಗಳು ಜಾಸ್ತಿ ಉಂಟಾಗದೇ ಇರುವುದರಿಂದ ಇದನ್ನು ಕಂಡುಹಿಡಿಯುವುದರೊಳಗಾಗಿ ಖಾಯಿಲೆ ಹರಡಿಬಿಟ್ಟಿರಾತ್ತದೆ. ಆದ್ದರಿಂದ ಚಿನ್ಹೆಗಳಿಲ್ಲಿಲ್ಲದಿದ್ದರೂ ಮುಟ್ಟು ನಿಂತಾಗ ನಿಮ್ಮ ವೈದ್ಯರಲ್ಲಿ ಸಲಹೆ ಕೇಳಬೇಕು. ಸ್ತನಗಳನ್ನು ಗರ್ಭಚೀಲ ಹಾಗೂ ಅಂಡಾಂಶಗಳ ಪರಿಶೀಲನೆಯನ್ನು ವರ್ಷಕ್ಕೊಮ್ಮೆ ಮಾಡಿಸಿದರೆ ಒಳಿತು.

ಶ್ವಾಸಕೋಶದ ಕ್ಯಾನ್ಸರ್ ಹಾಗೂ ಕರುಳಿನ ಕ್ಯಾನ್ಸರ್ ಇವುಗಳೆಲ್ಲ ವಯಸ್ಸಾದ ಮಹಿಳೆಯರಲ್ಲಿ ಬರಲು ಸಾಧ್ಯ ಬೇಗ ಪತ್ತೆ ಹಚ್ಚಿದಷ್ಟು ಬೇಗ ಗುಣಮುಖರಾಗುವ ಸಾಧ್ಯತೆ ಇರುವುದರಿಂದ ಸ್ವಲ್ಪ ಶಂಖೆ ಇದ್ದರೂ ಕೂಡ ವೈದ್ಯರಲ್ಲಿ ಸಲಹೆ ಕೇಳಿರಿ.

## ಗರ್ಭಕೋಶವು ಕೆಳಗೆ ಸರಿದಾಗ

ಹಲವಾರು ಹೆರಿಗೆಗಳ ನಂತರ ವಯಸ್ಸಾಗುತ್ತಾ ಹೋದಂತೆ ಗರ್ಭಚೀಲ ಅಥವಾ ಮೂತ್ರಪಿಂಡವನ್ನು ತಮ್ಮ ಸ್ಥಾನದಲ್ಲಿಡಬೇಕಾದಂತಹ ಆಧಾರಗಳು ಸಡಿಲವಾಗಿ, ಈ ಭಾಗಗಳು ಕೆಳಗೆ ಸರಿದಂತೆ ಭಾಸವಾಗುವುದು. ಇದರ ಪರಿಣಾಮವಾಗಿ ಮಲಮೂತ್ರ ವಿಸರ್ಜನೆಗೆ ತೊಂದರೆಗಳುಂಟಾಗಬಹುದು. ಗರ್ಭಕೋಶವು ಸಂಪೂರ್ಣವಾಗಿ. ಕೆಳಗೆ ಸರಿದಾಗ, ಶಸ್ತ್ರಕ್ರಿಯೆಯು ಮೂಲಕವೇ ಇದನ್ನು ಸರಿಪಡಿಸಲು ಸಾಧ್ಯ.

ಮೂತ್ರವಿಸರ್ಜನೆ ಸ್ಥಾನ ಹಾಗೂ ಮಲವಿಸರ್ಜನೆ ಸ್ಥಾನಗಳ ಮಧ್ಯೆ ಇರುವ ಗರ್ಭಚೀಲ ಹಾಗೂ ವೆಜೈನಾ ಇವುಗಳು ತಮ್ಮದೇ ಆದ ಜಾಗದಲ್ಲಿ ಭದ್ರವಾಗಿರಲು ಮಾಂಸಖಂಡಗಳು ಹಾಗೂ ಅಸ್ಥಿರಜ್ಜು ligenveal ಎಂಬುವು ಆಧಾರವಾಗಿರುತ್ತದೆ. ಮುಟ್ಟು ನಿಲ್ಲುತ್ತ ಬರುವ ಸಮಯದಲ್ಲಿ ಇವು ಸಡಿಲವಾಗಿ ಅಥವಾ ಹಲವಾರು ಹೆರಿಗೆ ನಂತರ ಹರಿದು ಹೋದಂತಾಗಿ ಆಧಾರವು ಕುಸಿಯುತ್ತದೆ. ಬಹಳ ವರ್ಷಗಳ ಕಾಲ ಕೆಮ್ಮು ಅಥವಾ ಮೈಭಾರ ಹೆಚ್ಚಾಗಿದ್ದಲ್ಲಿ ಮಲವಿಸರ್ಜನೆ ಕಠಿಣವಾಗಿ ಹೊಟ್ಟೆ ಕಟ್ಟಿದರೆ ಅಥವಾ ಸದಾ ಭಾರ ಹೊರುವ ಕೆಲಸ ಮಾಡುತ್ತಿದ್ದರೂ ಕೂಡ ಈ ಆಧಾರಗಳು ಸಡಿಲವಾಗಲು ಸಾಧ್ಯ.

ಕೆಳಹೊಟ್ಟೆಯಿಂದ ಏನೋ ಹೊರಬಂದಂತೆ ಅಥವಾ ಕಿಪ್ಪೊಟ್ಟೆ ಭಾರವಾದಂತೆ ಸಣ್ಣಗೆ ಸದಾ ನೋವಾದಂತೆ ಭಾಸವಾಗುವುದು. ಯಾವ ಭಾಗವು ಕೆಳಗೆ ಸರಿದಿದೆ ಎಂದು ಗೊತ್ತಾದಾಗ ಅದಕ್ಕೆ ವೈದ್ಯರು ತಕ್ಕ ಹೆಸರಿಡುತ್ತಾರೆ. Urethra ಎಂಬ ಭಾಗವು ಕೆಳ ಸರಿದಾಗ ಮೂತ್ರ ವಿಸರ್ಜನೆಗೆ ಹಿಡಿತ (ಕಂಟ್ರೋಲ್) ತಪ್ಪುತ್ತದೆ.

Cystocele ಮೂತ್ರ ಪಿಂಡವೇ ಕೆಳಸರಿದಾಗ ಸಿಸ್ಟೋಸಿಲ್ ಎಂದು ಹೆಸರು. ಮೂತ್ರ ವಿಸರ್ಜನೆಗೆ ತೊಂದರೆಯಾಗಿ ಸಂಪೂರ್ಣವಾಗಿ ವಿಸರ್ಜನೆ ಮಾಡಲು ಅವಕಾಶವಾಗದೇ ಇರಬಹುದು. ಸ್ವಲ್ಪ ಪ್ರಮಾಣದಲ್ಲಿ ಮೂತ್ರವು ಹೊರಬೀಳುತ್ತಿರಬಹುದು.

ಗರ್ಭಚೀಲ ಕೆಳಸರಿದಾಗ - Prolapse ಪ್ರೊಲಾಪ್ಸ ಎನ್ನುತ್ತಾರೆ. ಯೋನಿಯಿಂದ ಹೊರಗೆ ಸಂಪೂರ್ಣವಾಗಿ ಬಂದರೆ ಗರ್ಭಚೀಲದ ಖಾಯಿಲೆಯನ್ನು ವೀಕ್ಷಿಸಬಹುದು.

Enterocele - ಕರುಳಿನ ಭಾಗ ಕೆಳ ಸರಿದಾಗ ಎಂಟರೋಸೀಲ್ ಎನ್ನುತ್ತಾರೆ. Recxtocele ಎಂದರೆ ರೆಕ್ಟಮ್ ಮಲವಿಸರ್ಜನಾ ಭಾಗ ) ಕೆಳಗೆ ಸರಿಯುವುದು.

ಯೋನಿಯ ಮಲ ವಿಸರ್ಜನಾ ಭಾಗಗಳ ಮಧ್ಯೆ ಇರುವ ಸ್ನಳ ಹರಿದು ಹೋದಂತಾಗಿ ಮಲವಿಸರ್ಜನೆಗೆ ಕಂಟ್ರೋಲ್ ಹಿಡಿತ ಇರುವುದಿಲ್ಲ. ಹಲವಾರು ಪರೀಕ್ಷೆಗಳನ್ನು ಮಾಡಿದರೆ ಯಾವ ರೀತಿಯ ತೊಂದರೆ ಇದೆ ಎಂದು ಖಾತ್ರಿ ಮಾಡಿಕೊಳ್ಳಬಹುದು.

ಚಿಕಿತ್ಸೆ : ಔಷಧಿ ಅಥವಾ Physiotherapy (ವ್ಯಾಯಾಮ) ಕೊಟ್ಟರೆ ಹಲವರು ಗುಣಮುಖ-ರಾಗಬಹುದು.

ಶಸ್ತ್ರ ಕ್ರಿಯೆ : ಕೆಲವೊಮ್ಮೆ ಗರ್ಭಚೀಲವನ್ನು ಸ್ವಸ್ಥಾನದಲ್ಲಿ ಸೇರಿಸಲು ಶಸ್ತ್ರ ಕ್ರಿಯೆ ಮಾಡಬೇಕಾಗಿ ಬರುತ್ತದೆ. ಇನ್ನು ಕೆಲವರಲ್ಲಿ ಗರ್ಭಚೀಲವನ್ನೇ ತೆಗೆದು ಹಾಕಬೇಕಾಗುತ್ತದೆ. Petsary ಎಂಬ ಕೃತಕ ಆಧಾರ ಬಳಸಿದರೆ ಗರ್ಭಚೀಲಕ್ಕೆ ಸ್ವಲ್ಪ ಆಧಾರ ಸಿಕ್ಕಂತಾಗಿ ಅಲ್ಪಕಾಲದ ಮಟ್ಟಿಗೆ ಗುಣವಾಗಬಹುದು. ಸದಾಕಾಲ ಇದನ್ನು ಬಳಸಲಾಗುವುದಿಲ್ಲ.

ಹಲವು ದಿನಗಳಿಗೊಮ್ಮೆ ಶುದ್ಧಿಪಡಿಸಿ ಅದನ್ನು ಒಳಗೆ ಹಾಕಬೇಕು. ಮೂರು ಅಥವಾ ಆರು ತಿಂಗಳ ಕಾಲ ಬಳಸಿ ನಂತರ ಶಸ್ತ್ರ ಕ್ರಿಯೆಯ ಮೊರೆ ಹೋಗಬೇಕಾಗುತ್ತದೆ.

ಎಂಥವರಿಗೆ ಯಾವ ಚಿಕಿತ್ಸೆ ಸರಿಹೋಗುತ್ತದೆ ಎಂದು ನಿಮ್ಮ ವೈದ್ಯರ ಸಲಹೆಯ ಮೇರೆಗೆ ನಿರ್ಧರಿಸಬಹುದು.

# DISINFORMATION

- Dr. Manjunath

From times immemorial dissemination of " Disinformation " rather than " Information " has been the tool of many entrenched powers. It is commonly given to believe that gossip is dangerous. That may be so, but it is the written world that has caused permanent damage, because people tend to believe and take it for granted, that whatever appears in writing is true. A Pseudo- Sanctity is thus conferred on the written world than the spoken word. In fact, today many nationalities have either lost their history, culture and villains and tyrants have been glorified, solely because of the feeding of disinformation over a length of time.

1. Thus a tyrant and plunderer like Alexander oif Macedonia, has become Alexander the Great, a brave handsome man with all the noble manly qualities. There are films, plays, novels both in India and Greece, about this noble character ' Sikander', further enlarging his greater than life personality. Disinformation for over 2000 years, first by Greek " Historians " later by European " Scholars" and nurtured by our own beloved laurates, has continued to twist the history of atleast 4 major nations. Today, we know, that this great student of Aristotle, burnt the Great library of Persepolis. This patron of Arts and literature, reduced to ashes a thousand year-long achievements of civilizations which had the misfortune of being in the path of his victorious advance. History of Persia, whose civilization had flowered atleast a thousand years ahead of Greece was lost and Persia labelled Barbaric land.

2. Coming nearer home, we have Dushyanta f of Kalidasa, a noble man of unimpeachable character who loses his memory, because of a curse. Hardly few people a re aware that Kalidasa's artistic licence, and continued glorification of his work ". Shakuntalam" by successive generations of clever or gullible writers or artists, transformed a lecherous and opportunistic man into a great soul. Shakuntala's stroy appears in Mahabharata. Dushyant, there, is a king very fond of female company and always on the look out for fresh conquests. Neither was Shakuntala an innocent maiden who falls in love. She is quite aware of the status of a Queen for which she hankers. Dushyanta as expected of him disowns his marriage in fear of facing anger of the populace, which does not want a queen of doubtful progeny. Shakuntala goes away determined to raise a son to defeat the man who cheated her. So much so for the ' ring' which disappeared due to a fish. The episode can be termed, at best, ' fishy'.

3. Look at the manner in which successive generations of Sanskrit Scholars who have created the myth of the Greatest Indian writer of all times, " Kalidasa". The fact that Kalidasa had neither Shudraka's orginality nor Bhasa's versatality, has been conveniently obscured. That Kalidasa dashed out the same worn out theme whehter it is 'Shakuntala' or ' Malvikangnimitra' or ' Vikramovarshiya', and his prime aim was to flatter the king Bhoja, by comparing him to Vikrama, Agnimitra or Dushyanta is apparent even to the blind. But not to our artists. The effect of disinformation is so strong that even those of us who have not read any of the works of either Kalidasa or Bhasa come in vehement support of Kalidasa.

4. Look at the amount of disinformation carried through Hindu Mythology; That ' Rakshasa', ' Dasyu' were tribes of Rakshasas were invariably Brahmins and great scholars and artists, is also conveniently obscured. Instead all that is associated with Rakshasas is termed ' Ruksha', meaning lowly and when Dasyus were conquered and enslaved they became Dasas. Thus the word Dasa, which never belongs to Sanskrit became synonymous with slave. Think of the word ' Slave'. itself in English. It springs from the word 'Slav', whose people inhabit Eastern Europe and the Soviet Union. The word ' Slav' in slavic languages means ' the glorius one". When Romans conquered and used them as bonded labour, and the word ' Slav' became synonymous with the lowly. Thus the victor who makes the rules, always writes ' History' and sets up his own "Disinformation Service" aided and abetted by a group of flatterers who act with license under the garb of being scholars.

5. Coming very near home, the amount of disinformation disseminated by Sanskrit scholars who had the royal patronage is so vast, that ninety percent of Kannadigas themselves are not aware of the fact that Kannada belongs to the family of Dravidian languages; but in fact believe vehemently that kannada springs from Sanskrit. While spoken kannada in the villages, which was relatively protested from the pestilence of sanskrit scholars in the Royal courts, has for centuries remained relatively unchanged, written kannada which is the domain of the socalled literates, has been increasingly Sanskritised to a

point of self delusion. It is the ego of the literates, who always want to prove that they are a cut above the proletariat, that usually prompts them to discard a commonly used kannada word and stuff instead a Sanskrit word. In the whole process an entire vocabulary is lost to the kannada nation apart which have identical meaning to those in Sanskrit are always ascribed lowly meanings than their Sanskrit counterparts. For example, ' Betta-Parvata', 'Holey-Nadi' 'Bayake Aase'. There is no dearth of ' Pundits' who swear that Parvata is larger than Betta and that while Aase is a manly desire, Bayake is reserved only for expectant mothers"

6. Further, the disinformation continuously drills into us, that the borrowing is only one way traffic from Sanskrit to kannada. Never mind, 'Malaya Parvata', 'Meenakshi', ' Neeraja' and a host of other words: Now let us come to kannada Grammar. We are made to believe that Panini's Vyakarana is the ultimate for kannada; Never mind its incompatibility: If your kannada does not conform to panini's rules, you better bend it, least you are branded for speaking in **desi** or **Gramya** : I remember Smt. N. Pankaja, the novelist telling me some years back, ' Sanskrit is " tayiberu" for kannada, without it kannada loses its " Gambhirya". Be assured of **Bhagavanta** for a dose of Gambhirya: But disinformation has done its job; and a sense of inferiority complex has been ingrained into the kannada nation, with the eager abetting by our learned " scholars".

7. Disinformation has been now accepted by us not only as a mode of keeping people happy, but to rob heritage of other people. Disinformation has also disseminated that the present day Bharatanatya originates from Bharata muni's ' Natya Shastra', quite oblivious of the fact that the lady who renamed 'Dasi Attam' expired only a couple of years back. Never mind that the adavus and bhangis of Dasi attam bear no resemblance whatsoever to those enumerated by Bharata. And the danseuses who have been continuously theorizing about what Bharatamuni stated are not even aware of the fact that true to his tribe, **Bharata prohibited the use of 'barbaric languages like " Andhra, Dramila, Barbara and Kirata for Natya "** Apriori, such characters were not to be brought on to the stage, and even if brought should not be allowed to speak: What would have happened to ' Menakshi Kalyanam' if Bharata muni happened to have had a say, I wonder ; He would never have allowed this Tamil Princess being brought on the stage, and if at all allowed would have insisted that the Padams be in Sanskrit. But today, the Devadasis who originated this dance form in the Tamil-Kannada country, have not only been robbed of their livlihood, but even the credit for the origins of the dance. It is the very Tamil, Telugu Brahminical danseuses who quote Bharata till they are blue in the face, who are flourishing on borrowed feathers. But they have done their job well, because even in South today, a majority believe this art form to have sprung from Bharat muni: One more success to disinformation.

8. Coming nearer our own times, everyday over all available media, we are grilled that " National Language" means Hindi, all the ohers are regional languages. With the result, we and our own children are convinced that speaking a reglonal language is parochial, and speaking in Hindi is patriotic. No one bothers to even contradict this disinformation and protest that **there are 15 national languages recognised in the Indian Constitution and Hindi is only one of the two languages of the Union Government to transact its official business.** None of the statutes ever aver that Hindi is the national language. But everyday on Doordarshan and Schools it is drilled into our chilren's head. Disinformation at its peak:

9. The latest in this endeavour is the quote that Adi Shankara proscribed learning of Vedas by women and Shudra. One Arya Samaj Activist even has quoted that Adishankara prescribed the treatment of pouring molten lead into the ears of a woman who has accidentally heard the recitation of Vedas, but it is a fact of histroy, that Shankara accepted a lady, Ubhaya Bharati, as the sole judge of his Shastrartha discussions with Mandana Mishra:Shankara's Aradhya Devata, was a female deity. As for Shudras, Shankara accepted even a chandala as his Guru. But disinformation may yet take its toll in Adi Shankara as well: All that it takes is a few quotes, and if the quotes are in sanskrit, Greek or Latin, the matter is " Clinched" for sure.

We are told that education is the best cure for ignorance. I am not sure anymore. Even education is marketting a victor more glorified. The real tragedy is were have lost the ability to analyse the information fed to us each day. and we ourselves do our very best to snuff out that God-Given ability in our childern.

Regn. No. 040015/86
Regn. No. MH/BY/NE121/89

# ಸುತ್ತ-ಮುತ್ತ

## ಬೆಂಗಳೂರಿನಲ್ಲಿ

ಮುಂಬೈನ ಪ್ರಮುಖ ಕನ್ನಡ ಸಂಸ್ಥೆಗಳಾದ ಮೈಸೂರ ಅಸೋಸಿಯೇಷನ್, ಕರ್ನಾಟಕ ಸಂಘ, ರಾಷ್ಟ್ರೀಯ ಕನ್ನಡವಿದ್ಯಾಸಂಸ್ಥೆ, ಮುಂಬೈ ಕನ್ನಡ ಸಂಘ ಕನ್ನಡ ಕಲಾಕೇಂದ್ರ, ಇವುಗಳೊಡನೆ ನಿಕಟ ಸಂಪರ್ಕ ವಿರಿಸಿಕೊಂಡಿದ್ದ ಹಲವು ಕನ್ನಡಿಗರು ಸುಧೀರ್ಘಕಾಲ ಮುಂಬೈನಲ್ಲಿ ಸೇವೆ ಸಲ್ಲಿಸಿ ನಿವೃತ್ತಿಹೊಂದಿ ಈಗ ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ನೆಲೆಸಿರುವುದು ಅನೇಕ ಕನ್ನಡಿಗರಿಗೆ ತಿಳಿದಿರುವ ವಿಚಾರ. ಈ ಕನ್ನಡ ಗೆಳೆಯರು ಒಟ್ಟಾಗಿ ಸೇರುವುದಾಗಲಿ ಅಥವಾ ಒಬ್ಬೊಬ್ಬರೇ ಆಗಲಿ ವಿನಾಕರಣ ಸೇರಿ ಪರಸ್ಪರ ಮಾತು ಕತೆಯಾಡುವುದು ಬೆಂಗಳೂರಿನಂಥ ಮಹಾನಗರದಲ್ಲಿ ಕಷ್ಟ ಸಾಧ್ಯ. ಈ ಕೊರತೆಯನ್ನು ಸರಿಪಡಿಸುವ ಉದ್ದೇಶದಿಂದ ಕೆಲವು ಗೆಳೆಯರು ಶ್ರೀಯುತ ಜಿ. ಸುಬ್ಬಣ್ಣನವರ ಮನೆಯಲ್ಲಿ 7.4.90 ರ ಸಂಜೆ ಅನೌಪಚಾರಿಕವಾಗಿ ಸೇರಿದ್ದರು. ಪರಸ್ಪರ ಪರಿಚಯ ಸೇರಿದ ಮಹನೀಯರು ಮತ್ತು ಮಹಿಳೆಯರೇ ಮಾಡಿಕೊಂಡ ನಂತರ. ಶ್ರೀ ಸುಬ್ಬಣ್ಣನವರು ಮಾತನಾಡಿ ಆದಿನದ 'ಸ್ನೇಹಮಿಲನ'ದ ಉದ್ಧೇಶವನ್ನು ಚೆಕ್ಕದಾಗಿ, ಚೊಕ್ಕವಾಗಿ ವಿವರಿಸಿದರು. ನಂತರ ಈ ರೀತಿಯ 'ಸ್ನೇಹಕೂಟ' ಕಡೇಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಏರ್ಪಟ್ಟರೆ, ನಮ್ಮ ನಮ್ಮಲ್ಲಿ ಗೆಳೆತನದ ಬಾಂಧವ್ಯ ಬೆಳೆದು ಕೆಲವು ಕ್ಷಣಗಳು ವಿನೋದದಿಂದ ಕಾಲಹರಣ ಮಾಡಬಹುದೆಂದರು.

ಇದೇ ರೀತಿಯ 'ಸ್ನೇಹಕೂಟ' ಒಂದು 1989 ಸಪ್ಟೆಂಬರ್ 14 ರ ಸಂಜೆ ಶ್ರೀಯುತ ಎ. ನಾಗಭೂಷರಾಯರ ಮನೆಯಲ್ಲಿ ಏರ್ಪಟ್ಟಿತ್ತು.

ಮುಂದಿನ ಕೂಟ ಶ್ರೀಯುತ .ಎಸ್. ರಾಮರಾಯರ ಮನೆಯಲ್ಲಿ 9-6-90ರಂದು ಸೇರುವುದೆಂದು ನಿಶ್ಚಿತವಾಗಿದೆ. "ಸ್ನೇಹಕೂಟ' ದಲ್ಲಿ ಸೇರುವ ಮಹಿಳೆಯರ ಮತ್ತು ಮಹನೀಯರ ಸಂಖ್ಯೆ ಬಹಳ ಉತ್ತೇಜನಕಾರಿಯಾಗಿದೆ.

ಸೂಚನೆ: ಹೊಸ ಹೊಸದಾಗಿ ಬೊಂಬಾಯಿಂದ ನಿವೃತ್ತರಾಗಿ ಅಥವಾ ವರ್ಗಾಯಿಕೊಂಡು ಬೆಂಗಳೂರಿಗೆ ಬಂದು ನೆಲಸುವ ಕನ್ನಡ ಗೆಳೆಯರಿಗೆ ನಮ್ಮ "ಸ್ನೇಹಕೂಟ" ದಲ್ಲ ಸೇರಲು ಸುಸ್ವಾಗತ.

ವರದಿಗಾರ : ದುಗ್ಗಪ್ಪಯ್ಯ ಬಿ. ನಾಡಿಗ್.
'ಸುಜೀತ' 1533, 28ನೇ ಕ್ರಾಸ್,
ಬನಶಂಕರಿ ಎರಡನೆ ಹಂತ, ಬೆಂಗಳೂರು - 560 070.

## ಕನ್ನಡ ಸಂಘ, ಕೆ.ಜಿ. ಸೋಮಯ್ಯ ಕಾಲೇಜು

ಕೆ.ಜೆ. ಸೋಮಯ್ಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ವಿಭಾಗದ ಪ್ರಮುಖರೂ, ಕನ್ನಡ ಸಂಘದ ಕಾರ್ಯಾಧ್ಯಕ್ಷರೂ, ಕವಿ, ವಿಮರ್ಶಕರಾದ ಡಾ॥ ಸಂಜೀವ ಶೆಟ್ಟಿಯವರನ್ನು ಇತ್ತೀಚಿಗೆ (20.6.90) ಸಾಹಿತ್ಯಿಕ ಶೈಕ್ಷಣಿಕ ಸಾಧನೆಗಳಿಗಾಗಿ ಪ್ರಾಧ್ಯಾಪಕರ ಬಳಗದ ವತಿಯಿಂದ ಸನ್ಮಾನಿಸಲಾಯಿತು. ಡಾ॥ ಸಂಜೀವ ಶೆಟ್ಟಿ ಅವರಿಗೆ ಕೃಷ್ಣನ ಗೀತೋಪದೇಶದ ಕಲಾಕೃತಿಯನ್ನು ಪುಷ್ಪಗುಚ್ಛವನ್ನು ಪ್ರಾಂಶುಪಾಲ ಎಂ. ಟಿ. ಗಾಭೆಯವರು ನೀಡಿ ಸತ್ಕರಿಸಿದರು. ಡಾ॥. ಶೆಟ್ಟಿಯವರು ಕೃತಜ್ಞತೆ ಸಲ್ಲಿಸಿದರು.

## ವಿಶ್ವೇಶ್ವರಯ್ಯ ಫ್ಲೆ- ಓವರ್

ಭಾರತ ರತ್ನ ಡಾ॥ ಎಮ್ ವಿಶ್ವೇಶ್ವರಯ್ಯ ಅವರಂಥವರು ಯುಗಕ್ಕೊಮ್ಮೆ ಹುಟ್ಟಿ ಬರುತ್ತಾರೆ. ಅವರ ಜನ್ಮದಿಂದ ಅವರು ಹುಟ್ಟಿದ ದೇಶಕ್ಕೂ ಅವರು ಅಲಂಕರಿಸಿದ ಪದಕ್ಕೂ ಘನತೆಯುಂಟಾಗುತ್ತದೆ. ಗೌರವ ಪ್ರಾಪ್ತವಾಗುತ್ತದೆ. ಡಾ॥ ಎಂ ವಿಶ್ವೇಶ್ವರಯ್ಯನವರ ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ, ಸರಳತೆ, ಕಾರ್ಯಕುಶಲತೆಗಳ ಆದರ್ಶವನ್ನು ಇಂದಿನ ಎಂಜಿನಿಯರುಗಳು ಅನುಸರಿಸಿದರೆ ದೇಶದ ಅನೇಕ ಸಮಸ್ಯೆಗಳನ್ನೂ ಸುಲಭವಾಗಿ ಪರಿಹರಿಸಬಹುದು, ಎಂದು ಮುಂಬಯಿ ಮಹಾನಗರ ಪಾಲಿಕೆ ಮಹಾಪೌರ ಶ್ರೀ ಛಗನ್ ಭುಜಬಲ್‌ರು ಇಂದು ಮುಂಬಯಿ ಕರ್ನಾಟಕ ಸಂಘದಲ್ಲಿ ನುಡಿದರು. ಮುಂಬಯಿ ಮಹಾನಗರ ಪಾಲಿಕೆಯವರು ಮುಂಬಯಿ ಮಾತುಂಗಾ ವಿಭಾಗದಲ್ಲಿ ನಿರ್ಮಿಸಿದ ಫ್ಲೆ-ಓವರ್ ಸೇತುವೆಯ ನಾಮಕರಣ ಸಮಾರಂಭದ ಮುಖ್ಯ ಅತಿಥಿಗಳಾಗಿ ಶ್ರೀ ಭುಜಬಲ್ ಮಾತನಾಡುತ್ತಿದ್ದರು.

ಮಹಾನಗರ ಪಾಲಿಕೆಯ ಸಭಾಗೃಹದ ಧುರೀಣ ಶ್ರೀ ದಿವಾಕರ ರಾವತೆ ಅವರು ಈ ಫ್ಲೆ-ಓವರ್ ಸೇತುವೆಯ ನಾಮಫಲಕವನ್ನು ಅನಾವರಣ-ಗೊಳಿಸಿದರು.

ಕರ್ನಾಟಕ ಸಂಘದ ಡಾ॥ ಎಂ ವಿಶ್ವೇಶ್ವರಯ್ಯ ಸ್ಮಾರಕ ಮಂದಿರದಲ್ಲಿ ನಡೆದ ಈ ಸಡಗರದ ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಶ್ರೀ ಸುರೇಶ ಗಂಭೀರ ಅವರು ವಹಿಸಿದ್ದರು.

ಶ್ರೀಮತಿ ಗೀತಾ ಜಾವಡೇಕರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸದಾನಂದ ಶೆಟ್ಟಿಯವರು ಗಣ್ಯರನ್ನು ಸ್ವಾಗತಿಸಿ, ಮಹಾಪೌರ ಶ್ರೀ ಛಗನ್ ಭುಜಗಲ್ ಅವರಿಗೆ ಶಾಲು ಹೊದಿಸಿ ಫಲ-ಪುಷ್ಪಗಳನ್ನಿತ್ತು ಸನ್ಮಾನಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಶ್ರೀಪತಿ ಬಲ್ಲಾಳರು ಅತಿಥಿಗಳ ಪರಿಚಯ ಮಾಡಿದರು. ಸಂಘದ ಉಪಾಧ್ಯಕ್ಷ ಶ್ರೀ ಗೋಪಾಲ ಜಿನಗೌಡ ಹಾಗೂ ಶ್ರೀ ಅರವಿಂದ ರೇಳೆ ಡಾ॥ ವಿಶ್ವೇಶ್ವರಯ್ಯನವರ ಜೀವನ ಹಾಗೂ ಕಾರ್ಯ ಸುದ್ದಿಗಳನ್ನು ಕುರಿತು ಮಾತನಾಡಿದರು. ಸಂಘದ ಕಾರ್ಯಾಧ್ಯಕ್ಷರಾದ ಉಪಾಧ್ಯಕ್ಷ ಶ್ರೀ ಲಕ್ಷ್ಮಣ ಶೆಟ್ಟಿ ವಂದನಾರ್ಪಣೆಮಾಡಿದರು.

- ದತ್ತಾಗುರು ಕಿತ್ತೂರು,

## ಮೊಗವೀರ ವ್ಯವಸ್ಥಾಪಕ ಮಂಡಳಿ

ಮೊಗವೀರ ವ್ಯವಸ್ಥಾಪಕ ಮಂಡಳಿಯು ನಡೆಸುತ್ತಿರುವ ಕನ್ನಡ ಸರ್ಟಿಫಿಕೇಟ್ ಕೋರ್ಸು 1990 ನಲ್ಲಿ ಭಾಗವಹಿಸಿ, ತೃಪ್ತಿಕರ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ 'ಪ್ರಮಾಣ ಪತ್ರ' ವನ್ನು ಶ್ರೀಮತಿ ಸುನೀತಾ ಶೆಟ್ಟಿಯವರು ಶನಿವಾರ, ಜೂನ್ 23 ರಂದು ವಿತರಿಸಿದರು. ಮಂಡಳಿಯ ಅಧ್ಯಕ್ಷರಾದ ಕೆ. ಆರ್. ಪುತ್ರನ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು.

## ಮುಂಬಯಿ ವಿ. ವಿ. ಕನ್ನಡ ವಿಭಾಗ ಎಂ ಎ. ಮತ್ತು ಸರ್ಟಿಫಿಕೇಟ ಕೋರ್ಸುಗಳು 1990-90

ಪ್ರಸ್ತುತ ಶಿಕ್ಷಣ ವರ್ಷದ ಎಂ. ಎ. ಮತ್ತು ಕನ್ನಡೇತರಿಗೆ ಕನ್ನಡ ಕಲಿಸುವ ಸರ್ಟಿಫಿಕೇಟ ಅಭ್ಯಾಸ ವರ್ಗಗಳಿಗಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅಗೋಸ್ತಿನಿಂದ ಆರಂಭಗೊಳ್ಳುವ ಎಂ. ಎ. ತರಗತಿಗಳು ವಾರದ ನಾಲ್ಕು ದಿನಗಳು ಸಂಜೆಗೆ ಹಾಗೂ ಸರ್ಟಿಫಿಕೇಟ ತರಗತಿಗಳು ಪ್ರತಿ ಶನಿವಾರ ಅಪರಾಹ್ನ ನಡೆಯುತ್ತವೆ. ವಿವರಗಳಿಗಾಗಿ: ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ವಿದ್ಯಾನಗರಿ, ಮುಂಬಯಿ - 400 098 ಇವರನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ. (ದೂರವಾಣಿ 6120841 ವಿಸ್ತರಣ 286).

## ಎಂ. ಫಿಲ್. ಪದವಿ

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ವಿದ್ಯಾರ್ಥಿಗಳಾಗಿದ್ದ ಶ್ರೀ ಶಂಕರಾಯಣ ಉಡುಪ ಮತ್ತು ಶ್ರೀಮತಿ ಸರಸ್ವತಿ ಕುಲಕರ್ಣಿ ಅವರಿಗೆ ವಿಶ್ವವಿದ್ಯಾಲಯವು ಎ. ಫಿಲ್. ಪದವಿ ನೀಡಿದೆ. ಇವರುಗಳು ಕ್ರಮವಾಗಿ ಕೆಂಪುನಾರಾಯಣನ ಮುದ್ರಾಮಂಜೂಷ: ಹಸ್ತಪ್ರತಿಗಳ ಮತ್ತು ಮುದ್ರಿತ ಪ್ರತಿಗಳ ಪರಸ್ಪರ ಸಂಬಂಧ" ಮತ್ತು " ಕನ್ನಡ ಮತ್ತು ಮರಾಠಿ ಲಾವಣಿಗಳ ತೌಲನಿಕ ಅಧ್ಯಯನ" ಎಂಬ ವಿಷಯಗಳ ಮೇಲೆ ತಮ್ಮ ನಿಬಂಧಗಳನ್ನು ಸಲ್ಲಿಸಿದ್ದರು.



"ಈ ನೈಟ್ ವಾಚ್‌ಮನ್ ಗಸ್ತು ಹೊಡೆಯು-ತ್ತಿದ್ದಾನೆಂದುಕೊಳ್ಳಬೇಡಿ, ಅವನಿಗೆ ನಿದ್ದೆಯಲ್ಲ ನಡೆಯುವ ಅಭ್ಯಾಸವಿದೆ !...

Edited, Printed & Published by M. A. N. Prasad on behalf of the Mysore Association Bombay
Printed at Tangson Printers, Belgaum - 590 008. Phone : 24188, 25888 (works)